ಪ್ರಶ್ನೆ ಬಂದ ನಂತರ ಮಂಜೂರಾಗಿರುವ ಉತ್ತರವನ್ನು ಓದಗಿಸಲಾಗಿದೆ. ಎರಡನೆಯದಾಗಿ, ರಾಘವೇಂದ್ರ ರೇಷ್ಮೆ ಮಂಡಳಿಯವರು ಸುಮಾರು ಒಂದೂವರೆ ವರ್ಷದಿಂದ ತಿರುಗುತ್ತಿದ್ದಾರೆ. ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯಲ್ಲಿ ಸಂಬಂಧಪಟ್ಟ ಮಹಿಳಾ ಅಧಿಕಾರಿಗಳಿದ್ದಾರೆ. ಅವರು ನಾಲ್ಕು ಅಪ್ಲಿಕೇಷನ್‌ಗಳನ್ನು ಕಾಲ್‌ಫರ್ ಮಾಡಿದಾಗ ನಾನು ದಯಮಾಡಿ ಕಾಲ್‌ಫರ್ ಮಾಡಬೇಡಿ, ಅದು ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದೇನೆ. ನಂತರ ಅವರಿಗೆ ಅಂಕಿ-ಅಂಶಗಳನ್ನು ಹೇಳಿದೆ. ಬಹುಶಃ ಹೀಗೆ ಇರತಕ್ಕಂಥಾದ್ದು ಸರಿ ಎನ್ನತಕ್ಕಂಥ ಅಭಿಪ್ರಾಯ ನನಗೆ ಬಂದಿದೆ.

ಶ್ರೀ ವಿ. ಮುನಿಯಪ್ಪ:- ಸನ್ಮಾನ್ಯ ಅಧ್ಯಕ್ಷರೇ, ರಾಘವೇಂದ್ರ ರೇಷ್ಮೆ ನೂಲು ಮಹಿಳಾ ಮಂಡಳಿ ಬಗ್ಗೆ ನಾವು ಸಂಬಂಧಪಟ್ಟ ಜಿಲ್ಲೆಯ ಉಪ ನಿರ್ದೇಶಕರಿಂದ ವರದಿಯನ್ನು ಕೇಳಿದ್ದೇವೆ. ಅವರ ವರದಿ ಬಂದ ನಂತರ ಸರ್ಕಾರದ ಮತಿಯಿಂದ ಶಿಫಾರಸ್ಸು ಮಾಡತಕ್ಕಂಥ ಕೆಲಸ ಮಾಡುತ್ತೇವೆ.

ಹೊಸ ಆಸ್ಪತ್ರೆಗಳ ಮಂಜೂರಾತಿ

88 (486). ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕೊರಟಗೆರೆ ತಾಲ್ಲೂಕು ತೀತ ಗ್ರಾಮದಲ್ಲಿ ಹೊಸದಾಗಿ ಆರೋಗ್ಯ ಆಸ್ಪತ್ರೆ ಮಂಜೂರು ಮಾಡಲು ಸಾರ್ವಜನಿಕರಿಂದ ವಂತಿಗೆ ಸರ್ಕಾರಕ್ಕೆ ಕಟ್ಟಿ ಮನವಿ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ?

ಆ) ಹಾಗಿದಲ್ಲಿ, ಈ ಗ್ರಾಮಕ್ಕೆ ಆಸ್ಪತ್ರೆ ಮಂಜೂರು ಮಾಡಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) 1991-92ನೇ ಸಾಲಿನಲ್ಲಿ ಪ್ರಸ್ತಾವನೆ ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

Upgaradation of Hospitals

89 (248). SRI.L.R. SHIVARAMEGOWDA:- Will the Minister of Health and Family Welfare be pleased to state;

1. How many taluk Level Hospitals upagraded ?
2. What are the facilities provided for these upgraded Hospitals.?
3. Whether it has come to the notice of Govervment about the lack of facilities at G.H. Nagamangala ?
4. How many new Maternity Hospitals are to be sanctioned during 1992-93?

Sri G. Puttaswamy Gowda (Minister for Health and family welfare):-

1. 141

The facilities provided for 30 bedded and 50 bedded hospitals are as shown below:-

Details	30 beded Hospitals	50 beded Hospitals
Drugs	Rs.1.00 lakh	Rs.1.50 Lakhs

Diet	0.30 lakh	0.50 "	
Bedding & Linen	0.30 "	0.50 "	
P.O.L.	–		0.50 "
Vehicle	–		1.25 "
Dental Unit	0.30 "	0.30 "	
X-Ray Plant	1.75 "	1.75 "	

Details of Staff:

1. Health Officer (Jr.I)	–	1
2. Asstt.Surgeon-cum-Health Officer	3	3
3. Asstt.Dental Surgeon	1	1
4. Pharmacist	2	3
5. Jr. Lab. Tech	1	–
6. Sr.Lab.Tech	-	–
7. Group D & Helper for every 3 beds	14	2
8. Driver	–	2
9. Staff Nurses	3	6
10. Nursing Suptd.Gr.II	–	1
11. Office Suptd	1	1
12. F.D.A.	1	3
13. S.D.A.	3	5
14. Clerk-cum-Typist	1	1
15. Equipment & Apparatus	Rs 30,000	Rs 50,000

3. Yes

4. Not yet decided.

ಹೆರಿಗೆ ಆಸ್ಪತ್ರೆಯ ಮಂಜೂರಾತಿ

97 (250). ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕನಾಯಕನಹಳ್ಳಿ ತಾಲ್ಲೂಕು ಹುಳಿಯಾರಿನಲ್ಲಿ ಪ್ರಸೂತಿ ಗೃಹ ಮಂಜೂರಾತಿಗಾಗಿ ಜಿಲ್ಲಾ ಪರಿಷತ್‌ನ ಅನುಮೋದನೆ ದೊರಕಿದ್ದು, ಇನ್ನು ಕಾರ್ಯಗತವಾಗಿಲ್ಲದೇ ಇರುವುದು ಸತ್ಯವೆ.

ಆ) ಸರ್ಕಾರಿ ಆಜ್ಞೆ ಹೊರಬರಲು ವಿಳಂಬವಾಗಲು ಕಾರಣವೇನು ?

ಇ) ಅಲ್ಲಿಗೆ ಎಷ್ಟು ಹಾಸಿಗೆ ಪ್ರಸೂತಿ ಗೃಹ ಮಂಜೂರು ಮಾಡಲಾಗಿರುವುದು ಮತ್ತು ಯಾವಾಗ ಪ್ರಾರಂಭ ಮಾಡಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.